## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚಿಂತಾಮಣಿ.

| ಸಿ.ಸಿ.ನಂ. 1069/2023 | | | |
|---|---|---|---|
| ಸಾಕ್ಷಿದಾರರ ಹೆಸರು | ನಾರಾಯಣಮ್ಮ | | |
| ಗಂಡನ ಹೆಸರು | ಹನುಮಂತಪ್ಪ | ಪಿಡಬ್ಲೂ: | 5 |
| ವಯಸ್ಸು: | 65 ವರ್ಷ | ಸಿಡಬ್ಲೂ: | 6 |
| ಉದ್ಯೋಗ: | ಗೃಹಿಣಿ | | |
| ವಾಸ ಸ್ಥಳ: | ಮಂಚೇನಹಳ್ಳಿ | | |

**ದಿನಾಂಕ: 07-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ ಸ ಅ ರವರಿಂದ:-**

ಚಾಸಾ-1 ನನ್ನ ದೊಡ್ಡಮ್ಮನವರ ಮಗಳು. ಚಾಸಾ-2 ರಿಂದ 5 ರವರು ನನ್ನ ದೊಡ್ಡಪ್ಪನ ಮಕ್ಕಳು. ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ನನ್ನ ಅಣ್ಣ ತಮ್ಮಂದಿರು ಆಗಿರುತ್ತಾರೆ. ಚಾಸಾ-1 ರವರಿಗೆ ಮೋಸ ಮಾಡಿರುವ ನನಗೆ ಗೊತ್ತಿರುವುದಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಮುಂದುವರೆದ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು:: ಮಾನ್ಯ ಸ ಸ ಅ ರವರಿಂದ:-**

5 ನೇ ಆರೋಪಿ ಗೋಪಿ ನನ್ನ ತಮ್ಮ. ಉಳಿದ ಆರೋಪಿ 1 ರಿಂದ 4 ಎಲ್ಲರೂ ಸೇರಿಕೊಂಡು ಸ.ನಂ. ಗೋಪಸಂದ್ರ ಗ್ರಾಮ ಸ.ನಂ. 63/1 1 ಎಕರೆ 24 ಗುಂಟೆ ಹಾಗೂ ಸ.ನಂ. 166 ರಲ್ಲಿ 1 ಎಕರೆ 22 ಗುಂಟೆ ಜಮೀನನ್ನು ನಮ್ಮ ತಾತನ ತಿಮ್ಮರಾಯಪ್ಪ ಹೆಸರಿನಲ್ಲಿದ್ದು ಅವರು ಮೃತ ಪಟ್ಟಿರುತ್ತಾರೆ ಸದರಿ ಜಮೀನುಗಳು ಗೊಲ್ಲನಾರಾಯಣಪ್ಪ ಮತ್ತು ಮುನಿವೆಂಕಟಪ್ಪ ರವರ ಹೆಸರಿಗೆ

ಬಂದಿರುತ್ತದೆ. ನಂತರ ದಿಃ 01.10.2015 ರಂದು ಗೊಲ್ಲ ನಾರಾಣಯಪ್ಪ ಮೃತ ಪಟ್ಟಿರುತ್ತಾರೆ. ಈಗ ನ್ಯಾಯಾಲಯ ಮುಂದೆ ಎಲ್ಲ ಆರೋಪಿಗಳು ಫವತಿ ವಾರಸು ಮಾಡಿ ಕೊಡುವಂತೆ ಗ್ರಾಮ ಲೆಕ್ಕಾದಿಕಾರಿಗಳಿಗೆ ಹಾಗೂ ರಾಜಸ್ವ ನೀರಿಕ್ಷರಿಗೇ ಅರ್ಜಿಯನ್ನು ಸಲ್ಲಿಸಿಕೊಂಡಿದ್ದು '' ಈ ಜಮೀನುಗಳನ್ನು ನಿಮ್ಮ ಹೆಸರಿಗೆ ಫವತಿ ವಾರಸು ಮಾಡಬೇಕಾರದೆ ವಂಶ ವೃಕ್ಷದಲ್ಲಿ 1 ಹೆಂಡತಿ ಮಕ್ಕಳು ಮತ್ತು ನಿಮ್ಮ ಜೊತೆಯಲ್ಲಿ ಹುಟಿಟರುವ ಹೆಣ್ಣು ಮಕ್ಕಳೆಲ್ಲ ಜಂಟಿ ಖಾತೆ ಮಾಡಿಕೊಳ್ಳುಲು ಯಾವುದೇ ತಂಟೆ ತಕರಾರು ಇರುವುದಿಲ್ಲ ಎಂದು ಒಪ್ಪಿಗೆ ಪತ್ರವನ್ನು ಕೊಡಬೇಕು ಎಂದು ಹೇಳಿದಾಗ ಈಗ ನ್ಯಾಯಾಲಯದ ಮಂದೆ ಇರುವ ಆರೋಪಿಗಳು ಸಾಕ್ಷಿ 1 ರಿಂದ 6 ರವರಿಗೆ ಮೊಸ ಮಾಡುವ ಉದ್ದೇಶದಿಂದ ಅವರ ಸಹಿಗಳನ್ನು ನಕಲು ಸೃಷ್ಟಿ ಮಾಡಿರುತ್ತಾರೆ ಎಂದು ಸಾಕ್ಷಿ 1 ರವರು ನಿಪಿ-1 ರಂತೆ ದೂರು ನೀಡಿ ಆ ವಿಚಾವಾಗಿ ದಿಃ 15.04.2022 ರಂದು ಪೊಲಿಸರ ಮುಂದೆ ಈಗ ಓದಿ ಹೇಳಿದಂತೆ ---- ಹೇಳಿಕೆ ನೀಡಿರುತ್ತಿರಾ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿ 1 ರಿಂದ 5 ರವರು ನಿಮ್ಮ ಅಣ್ಣ ತಮ್ಮದಿಂರು ಆಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಶ್ರೀ.ಎಸ್ ಇ ಎನ್ ಆರೋಪಿ ಪರ ವಕೀಲರಿಂದಃ- ಇಲ್ಲ.**

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)** **ಓ ಹೇ ಕೇ ಸ ಇದೆ.**

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.